**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಎಫ್. ಟಿ. ಎಸ್. ಸಿ.-1**
**ಹಾವೇರಿ**
**ಎಸ್.ಸಿ. ನಂ. 13/2024**

**PW**-12
**CW**-21

ಸಾಕ್ಷಿದಾರರ ಹೆಸರು : ಶ್ರೀ ನಾಗಪ್ಪ
ತಂದೆ ಹೆಸರು : ಶ್ರೀ ಹನಮಂತಪ್ಪ
ವಯಸ್ಸು : 42 ವರ್ಷ
ಉದ್ಯೋಗ : ಚಾಲಕ
ವಾಸ ಸ್ಥಳ : ಗೆಜ್ಜಿಹಳ್ಳಿ

**ದಿನಾಂಕಃ 03.07.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

1. ನನಗೆ ಫ್ರಾಸಾ-1 ಜಗದೀಶ , ಫ್ರಾಸಾ-2 ಮಾಂತೆಶ , ಫ್ರಾಸಾ-3 ಮೈಲಾರಪ್ಪ , ಫ್ರಾಸಾ-4 ಶಿವಕುಮಾರ , ಫ್ರಾಸಾ-5 ಸುನಂದ ನನಗೆ ಪರಿಚಯ. ಚಾಸಾ-11 ಜಯಂತಪ್ಪ , ಚಾಸಾ-12 ಹನಮಂತಪ್ಪ ,ಚಾಸಾ-13 ಮಾಲತೇಶ , ಚಾಸಾ-14 ನೀಲಪ್ಪ , ಚಾಸಾ-15 ಅಶೋಕ , ಚಾಸಾ-16 ಹನಮಂತಪ್ಪ , ಚಾಸಾ-17 ರಾಮಣ್ಣ , ಚಾಸಾ-18 ಗುಡ್ಡಪ್ಪ , ಚಾಸಾ-19 ಬೀಮಪ್ಪ , ಚಾಸಾ-20 ರಮೇಶ , ಫ್ರಾಸಾ-7 ಮಾಲತೇಶ , ಫ್ರಾಸಾ-8 ಜಗದೀಶ ನನಗೆ ಪರಿಚಯ.
2. ಆರೋಪಿತರು ನನಗೆ ಗೊತ್ತು.
3. ದಿಃ 22.03.2022 ರಂದು ನಮ್ಮ ಊರಿನಲ್ಲಿ ದ್ಯಾಮವ್ವ ಹಾಗೂ ಕೆಂಗಣ್ಣ ದುರ್ಗಮ್ಮನ ಜಾತ್ರೆ ನಡೆದಿತ್ತು. ನಾವು ಕಮೀಟಿಯವರು ಹಾಗೂ ಊರ ಮುಖಂಡರು ಸೇರಿ ಟ್ರಾಕ್ಟರನ್ನು ಮೆರವಣಿಗೆಗೆಂದು ಸಿಂಗರಿಸುತ್ತಿದ್ದೆವು.

**4.** ರಾತ್ರಿ 10.00 ಗಂಟೆಗೆ ಪ್ರಾಸಾ-1 ಜಗದೀಶ ಅವರ ಮನೆಯ ಹತ್ತಿರ ಗಲಾಟೆ ಕೇಳಿ ಬಂತು. ನಾವು ಆ ಸಮಯದಲ್ಲಿ ನಾನು ಚಾಸಾ-11 ಜಯಂತಪ್ಪ , ಚಾಸಾ-12 ಹನಮಂತಪ್ಪ ,ಚಾಸಾ-13 ಮಾಲತೇಶ , ಚಾಸಾ-14 ನೀಲಪ್ಪ , ಚಾಸಾ-15 ಅಶೋಕ , ಚಾಸಾ-16 ಹನಮಂತಪ್ಪ , ಚಾಸಾ-17 ರಾಮಣ್ಣ , ಚಾಸಾ-18 ಗುಡ್ಡಪ್ಪ , ಚಾಸಾ-19 ಬೀಮಪ್ಪ , ಚಾಸಾ-20 ರಮೇಶ ಪ್ರಾಸಾ-7 ಮಾಲತೇಶ ಮತ್ತು ಪ್ರಾಸಾ-8 ಜಗದೀಶ ಹೋದೆವು.

**5.** ಶಿವಕುಮಾರ ,ಮೈಲಾರಪ್ಪ ಹಾಗೂ ಮಹಾಂತೇಶ ಇವರಿಗೆ ರಕ್ತಗಾಯಳಾಗಿದ್ದವು. ಒಬ್ಬರಿಗೆ ಬೆನ್ನಿಗೆ ಒಬ್ಬರಿಗೆ ಅಂಗೈಯಲ್ಲಿ , ಒಬ್ಬರಿಗೆ ಎಡ ಬೆನ್ನಿಗೆ ರಕ್ತಗಾಯಗಳಾಗಿದ್ದವು. ಸದರಿಯವರನ್ನು ನಾನು ಜನರನ್ನ ಸೇರಿಸಿ ಆಸ್ಪತ್ರೆಗೆ ಕರೆದುಕೊಂಡು ಹೋಗುವ ತಯಾರಿಯಲ್ಲಿದ್ದೆ. 1 ನೇ ಆರೋಪಿ ರೇವಣೇಶ ಇದ್ದು ಅವನ ಕೈಯಲ್ಲಿ ಚಾಕು ಇತ್ತು. ಅವರನ್ನು ಆಸ್ಪತ್ರೆಗೆ ಕಳುಹಿಸುವ ವ್ಯವಸ್ಥೆ ಮಾಡಿದೆ. ಅದು ಏಕೆ ಗಲಾಟೆ ಆಗಿತ್ತು ಎಂದು ನನಗೆ ಗೊತ್ತಿರಲಿಲ್ಲ.

**6.** ನಾನು ಅವರನ್ನು ಹಾನಗಲ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದೆ. ಅಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಹಾವೇರಿಗೆ ಕರೆದುಕೊಂಡು ಬಂದೆವು. ನಾವು ಪೋಲಿಸ ಸ್ಟೇಶನಗೆ ಹೋದಾಗ ಆರೋಪಿತರು ಠಾಣೆಯಲ್ಲಿದ್ದರು. ಆರೋಪಿತರನ್ನು ನಾನು ಜಗದೀಶ ಅವರ ಮನೆಯ ಮುಂದೆಯೂ ಸಹ ನೋಡಿರುತ್ತೇನೆ.

**7.** ಘಟನಾ ಸ್ಥಳದಲ್ಲಿ ಒಂದು ವಾಹನವನ್ನು ನೋಡಿರುತ್ತೇನೆ.

**8.** ಸದರಿ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಚಾಕುವನ್ನು ನಾನು ಈಗ ನೋಡಿ ಗುರುತಿಸುತ್ತೇನೆ. ಸದರಿ ಚಾಕುವನ್ನು ಮುಮಾ-1 ಎಂದು ಈಗಾಗಲೆ ಗುರುತಿಸಲಾಗಿದೆ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀ ಎಸ್ ಜಿ ಹೆಚ್ ಅವರಿಂದಃ</u>**

**9.** ನಾನು ದೇವಸ್ಥಾನದ ಕಮೀಟಿಯ ಸದಸ್ಯನಲ್ಲ.

**10.** ಜಾತ್ರೆಯ ಬಂದೊಬಸ್ತಗಾಗಿ ಪೋಲಿಸರು ಜಾತ್ರೆಯ ಸ್ಥಳದಲ್ಲಿ ಇರುತ್ತಾರೆ ಎಂದರೆ ಸರಿ. ಘಟನೆಯ ದಿನ ಸಹ ಹಾನಗಲ ಪೋಲಿಸರು ನಮ್ಮೂರಿನಲ್ಲಿ ಬಂದೊಬಸ್ತಗೆ ಇದ್ದರು.

**11.** ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ. ಟ್ರ್ಯಾಕ್ಟರ ಸಿಂಗರಿಸುವ ಸಮಯದಲ್ಲಿ 20 ಜನ ಇದ್ದರು. ಅವರು ಯಾರು ಎಂದು ನಿರ್ದಿಷ್ಟವಾಗಿ ಎಲ್ಲರ ಹೆಸರು ಹೇಳಲು ಆಗುವುದಿಲ್ಲ.

**12.** ನಾನು ಈ ದಿನ ಫ್ರಾಸಾ-1 ಜಗದೀಶ ಜೊತೆ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಆದರೆ ಜಗದೀಶ ನ್ಯಾಯಾಲಯಕ್ಕೆ ಬಂದಿರುತ್ತಾರೆ.

**13.** ಜಗದೀಶ ಹಾಗೂ ನಾನು ಫೈನಾನ್ಸ ವ್ಯವಹಾರ ಮಾಡುತ್ತೇವೆ ಎಂದರೆ ಸರಿಯಲ್ಲ.

**14.** ಊರಿನ ಜನರೆಲ್ಲ ಮಾತನಾಡಿಕೊಂಡು ಆರೋಪಿತರ ಮೇಲೆ ದೂರನ್ನು ಸಲ್ಲಿಸುವಂತೆ ಮಾಡಿರುತ್ತಾರೆ ಎಂದರೆ ಸರಿ . ಈ ರೀತಿ ಮತ್ತೆ ಘಟನೆಯಾಗಬಾರದುಎಂದು ಸ್ಟ್ರಿಕ್ಟ ಮಾಡಲು ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ.

**15.** ನಾನು ರಾತ್ರಿ 10.00 ರ ಸಮಾರಿಗೆ ಜಗದೀಶನ ಮನೆಯ ಹತ್ತಿರ ಗಲಾಟೆ ಶಬ್ದ ಕೇಳಿದ ಕಾರಣ ಅಲ್ಲಿ ಹೋಗಿ ನೋಡಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**16.** ಇಬ್ಬರ ಬೆನ್ನಿಗೆ ಮತ್ತು ಒಬ್ಬರ ಅಂಗೈಗೆ ರಕ್ತ ಗಾಯಗಳಾದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**17.** ನಾನು ಆ ದಿನ ಚಾಕುವನ್ನು ನೋಡಿರುತ್ತೇನೆ ಎಂದು ಹೇಳಿದ್ದು , ಆ ಚಾಕುವಿನ ಬಗ್ಗೆ ಯಾವುದೇ ಗುರುತುಗಳನ್ನು ನೆನಪಿನಲ್ಲಿ ಇಟ್ಟುಕೊಂಡಿರುವುದಿಲ್ಲ.

18. ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಜಗದೀಶ ಹಾಗೂ ಗಾಯಾಳುಗಳನ್ನು ನಾನು ಕರೆದುಕೊಂಡ ಬಗ್ಗೆ ಬರೆಸಿಲ್ಲ. ನಾನು ಸದರಿಯವರನ್ನು ಯಾವುದೇ ಆಸ್ಪತ್ರೆಗೆ ದಾಖಲಿಸಿಲ್ಲ ಎಂದರೆ ಸರಿಯಲ್ಲ.

19. ಆ ದಿನ ಯಾವುದೇ ಘಟನೆ ನಡೆಯದೇ ಇದ್ದರೂ ಜಗದೀಶನ ಮಾತು ಕೇಳಿ ಆರೋಪಿತರ ಮೇಲೆ ಊರ ಜನರು ಸುಳ್ಳು ದೂರನ್ನು ಸಲ್ಲಿಸಿದ ಕಾರಣ ನಾನು ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

20. ಆರೋಪಿತರು ಘಟನೆಯಾಗಿದೆ ಎಂದು ಹೇಳುವ ಸ್ಥಳದಲ್ಲಿ ಇಲ್ಲದಿದ್ದರೂ ಇದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

21. ಮುಮಾ-1 ಚಾಕುವಿಗೂ , 1 ನೇ ಆರೋಪಿ ರೇವಣೆಶನಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಉಕ್ತ ಲೇಖನ ಮೇಲೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ. ಸರಿ ಇದೆ.**

**(ಅಶ್ವಿನಿ ವಿಜಯ ಶಿರಿಯಣ್ಣವರ)**
**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಎಫ್.ಟಿ.ಎಸ್.ಸಿ.-1, ಹಾವೇರಿ**